# ಕರ್ನಾಟಕ ಸರ್ಕಾರ

ಸಂಖ್ಯೆ : ಮಮಇ:18:ಸ್ವೀಮರ:2017

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ, ಬೆಂಗಳೂರು.
ದಿನಾಂಕ:21.03.2018

**ಇವರಿಂದ :**

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು.

**ಇವರಿಗೆ,**

ಮುಖ್ಯ ಮೌಲ್ಯಮಾಪನಾಧಿಕಾರಿ
ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ
5ನೇ ಮಹಡಿ, 2ನೇ ಹಂತ,
ಬಹುಮಹಡಿ ಕಟ್ಟಡ, ಬೆಂಗಳೂರು

**ವಿಷಯ :** ಮೌಲ್ಯಮಾಪನ ವರದಿಗೆ ಅನುಪಾಲನಾ ವರದಿಯನ್ನು ಸಲ್ಲಿಸುವ ಬಗ್ಗೆ

**ಉಲ್ಲೇಖ :** ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಪತ್ರ ಸಂಖ್ಯೆ: ಮಮಅಇ:ಮಕವಿ:ಸಾಂ.ಕೇ:ಮಾಮಾ:10:17-18, ದಿನಾಂಕ:23.12.2017.

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ವತಿಯಿಂದ ಸಾಂತ್ವನ ಯೋಜನೆಯ ಬಗ್ಗೆ ಮಾಡಲಾದ ಶಿಫಾರಸ್ಸುಗಳಿಗೆ ಉಲ್ಲೇಖಿತ ಪತ್ರದನ್ವಯ ಕೈಗೊಂಡ ಅನುಪಾಲನಾ ವರದಿಯ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

(ಸಂಧ್ಯಾ ಎಲ್ ನಾಯಕ್)
ಸರ್ಕಾರದ ಅಧೀನ ಕಾರ್ಯದರ್ಶಿ-1
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅನುಪಾಲನಾ ವರದಿ

| | | |
|---|---|---|
| | **Convergence of Programmes :** The convergence of Santwana Programme with other central programmes Ujjawala, Swadhar and stay Homes could be thought of as all these programmes are focusing on the same issue of women in distress. It is observed that some of NGO's are implementing some of these programmes along with the Santwana programme. For example IDARY an NGO in Shiggaon in Haveri District is also implementing Ujwala and Short Stay Home programme, while the Pragna Counselling Centre in Mangalore is implementing Swadhar and Destitute Cottage Programmes. | ➤ ಸಾಂತ್ವನ ಕಾರ್ಯಕ್ರಮವನ್ನು ಭಾರತ ಸರ್ಕಾರದಿಂದ ಅನುಷ್ಠಾನಗೊಳಿಸುತ್ತಿರುವ ಸ್ವಾಧಾರಗೃಹ ಹಾಗೂ ಉಜ್ವಲಾ ಯೋಜನೆಗಳಲ್ಲಿ ಒದಗಿಸುವ ಸೌಲಭ್ಯಗಳೊಂದಿಗೆ ಒಗ್ಗೂಡಿಸಲು (Convergence) ಕ್ರಮ ವಹಿಸಲಾಗಿದೆ.<br>➤ ಸಾಂತ್ವನ ಕೇಂದ್ರಗಳಲ್ಲಿ ನೆರವು ಕೋರಿ ಬಂದಂತಹ ಸಂಕಷ್ಟದಲ್ಲಿರುವ ಮಹಿಳೆಯರ ಅಗತ್ಯತೆಗನುಗುಣವಾಗಿ ಸ್ವಾಧಾರ ಗೃಹ ಹಾಗೂ ಮಹಿಳೆಯರ ಸಾಗಾಣಿಕೆಗೆ ಸಂಬಂಧಪಟ್ಟ ಪ್ರಕರಣಗಳಿದ್ದಲ್ಲಿ ಉಜ್ವಲಾ ಕೇಂದ್ರಗಳ ಸೌಲಭ್ಯ ಪಡೆಯಲಾಗುತ್ತಿದೆ. |
| 2 | **Involvement of Taluk Level personnel :** Taluk Level Officers of the Women & Child Development Department need to be given the time bound responsibility of checking the functioning and monitoring of Santwana centres and the cases registered by the them. | ➤ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಸಾಂತ್ವನ ಕೇಂದ್ರಗಳಿಗೆ ಪ್ರತಿ ತಿಂಗಳು ಭೇಟಿ ನೀಡಿ ಮೇಲ್ವಿಚಾರಣೆಗೆ ಮತ್ತು ಉಸ್ತುವಾರಿ ಮಾಡುವಂತೆ ಸೂಚಿಸಲಾಗಿದೆ.<br>➤ ಕೇಂದ್ರಗಳಿಗೆ ದಾಖಲಾದ ಪ್ರಕರಣಗಳ ಬಗ್ಗೆ ಪರಿಶೀಲನೆ ಮಾಡವುದರೊಂದಿಗೆ ಪ್ರಕರಣಗಳನ್ನು ಇತ್ಯರ್ಥಗೊಳಿಸುವ ಬಗ್ಗೆ ಸೂಕ್ತ ಮಾರ್ಗದರ್ಶನ ಮಾಡುತ್ತಿದ್ದಾರೆ.<br>➤ ಇದಲ್ಲದೇ ಸಾಂತ್ವನ ಕೇಂದ್ರಗಳ ನಿರ್ವಹಣೆ ಕುರಿತು ನಿರ್ದಿಷ್ಟ ಕಾರ್ಯವಿಧಾನ ಮತ್ತು ಕಾಲಮಿತಿ ಇಲ್ಲದಿರುವುದನ್ನು ಮನಗಂಡು S.O.P. (Standard Operating Procedure)ನ್ನು ಸಿದ್ಧಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |
| 3 | **1091 Helpline Number :** Taluk Santwana helpline number 1091 needs to be made fully functional as it is not operational in many places and NGO's have given their landline and personnel mobile numbers to the community | ➤ ಪ್ರಸ್ತುತ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಾಂತ್ವನ ಕೇಂದ್ರಗಳ 1091 ಮಹಿಳಾ ಸಹಾಯವಾಣಿಯನ್ನು ಕೇಂದ್ರ ಸರ್ಕಾರದ Universalisation of Women Helpline-181ನೊಂದಿಗೆ ವಿಲೀನಗೊಳಿಸಲು ಕ್ರಮ ವಹಿಸಲಾಗುತ್ತಿದೆ. |
| 4 | **Training**<br>➤ There is a need for imparting more and | ➤ ಸಾಂತ್ವನ ಕೇಂದ್ರಗಳ ಸಿಬ್ಬಂದಿಗಳಿಗೆ ನಿಯಮಿತವಾಗಿ ಪುನಃಶ್ಚೇತನ |

| | | |
|---|---|---|
| | centre staff.<br>➢ The type training provided to women needs to be rethought of instead of the old but now not relevant skill of Agarbathi making and candle making, more relevant employment providing skill training may be given using convergence with Skill Development Corporation. | ➢ ಮೌಲ್ಯಮಾಪನ ವರದಿಯಲ್ಲಿ ಮಾಡಿದ ಶಿಫಾರಸ್ಸಿನಂತೆ ಸಾಂತ್ವನ ಕೇಂದ್ರಕ್ಕೆ ನೆರವು ಕೋರಿ ಬಂದ ಮಹಿಳೆಯರಿಗೆ ಅವಶ್ಯಕತೆಗೆ ಅನುಗುಣವಾಗಿ ಕೌಶಲ್ಯಾಭಿವೃದ್ದಿ ತರಬೇತಿಯನ್ನು ಕೌಶಲ್ಯಾಭಿವೃದ್ಧಿ ನಿಗಮದ ವತಿಯಿಂದ ನೀಡಲು ಕ್ರಮ ಕೈಗೊಳ್ಳಲಾಗುವುದು. |
| 5 | **District Level Meeting :** In each district there can be one committee that would monitor the functioning of all women welfare related schemes, instead of a Committee for each scheme under women welfare. Santwana should be reviewed by this Committee | ➢ ಸ್ಥೈರ್ಯನಿಧಿ ಯೋಜನೆ ಮತ್ತು ಡಿ.ಪಿ.ಕಾಯ್ದೆಯಡಿ, ವರದಕ್ಷಿಣೆ ನಿಷೇಧ ಕಾಯ್ದೆ ಇವುಗಳು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದು, ಸದರಿ ಸಮಿತಿಗಳೆ ಸಾಂತ್ವನ ಯೋಜನೆ ಪರಿಶೀಲನೆ ಕೈಗೊಳ್ಳುವ ಕುರಿತು ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ |
| 6 | **Compensation to Affected Women :** The Compensation provided to affected women needs to be enhanced and district Level Committee should be authorized to sanction it. | ➢ ಮಾರ್ಗಸೂಚಿಯನ್ವಯ ಆರ್ಥಿಕ ಪರಿಹಾರವನ್ನು ರೂ.10,000/-ಗಳನ್ನು ನೀಡಲಾಗುತ್ತಿದ್ದು, ಇಲಾಖೆಯಿಂದ 2014-15ನೇ ಸಾಲಿನಲ್ಲಿ ಸ್ಥೈರ್ಯನಿಧಿ ಯೋಜನೆ ಅನುಷ್ಠಾನಗೊಳ್ಳಲಾಗುತ್ತಿದ್ದು, ಈ ಯೋಜನೆಯಡಿ ಪ್ರತಿ ಅತ್ಯಾಚಾರ ಪ್ರಕರಣಕ್ಕೆ ಎಫ್.ಐ.ಆರ್. ದಾಖಲಿಸಿದ 24 ಗಂಟೆಯೊಳಗಾಗಿ ತುರ್ತು ಪರಿಹಾರಕ್ಕಾಗಿ ರೂ.25,000ಗಳ ಆರ್ಥಿಕ ಸಹಾಯ ಒದಗಿಸಲಾಗುತ್ತಿದೆ. ಆದ್ದರಿಂದ ಸಾಂತ್ವನ ಯೋಜನೆಯಲ್ಲಿ ಆರ್ಥಿಕ ಪರಿಹಾರ ನೀಡುವ ಅವಶ್ಯಕತೆ ಇಲ್ಲದೆ ಇರುವುದರಿಂದ ಸಾಂತ್ವನ ಯೋಜನೆಯಲ್ಲಿ ಆರ್ಥಿಕ ಪರಿಹಾರ ಅಂಶವನ್ನು ಕೈಬಿಡಲು ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ. |
| 7 | **NGO's Involvement:**<br>➢ NGO's have to engage qualified social workers as in some cases, ITI trained, under graduates working in the same NGO's accounts personnel of the NGO etc are working as social workers.<br>➢ Leverage other Skill Development programmes for economic rehabilitation streeshakthi, Skill Development programmes of Don Bosco, RUDSET, NSDC etc., | ➢ ದಿನಾಂಕ:18.01.2016ರ ಸರ್ಕಾರದ ಆದೇಶದಲ್ಲಿ ನಿಗದಿಪಡಿಸಿದ ವಿದ್ಯಾರ್ಹತೆಯಂತೆ ಸಮಾಜಸೇವೆ ಸಮಾಜಸೇವಾ ಕಾರ್ಯಕರ್ತರನ್ನು ಕಡ್ಡಾಯವಾಗಿ ನೇಮಕಾತಿ ಮಾಡಿಕೊಳ್ಳುವಂತೆ ಸೂಚಿಸಲಾಗಿದೆ.<br>➢ ಮಹಿಳೆಯರ ಅಗತ್ಯತೆಗೆ ಅನುಗುಣವಾಗಿ ಆರ್ಥಿಕ ಪುನರ್ವಸತಿಗಾಗಿ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವ ರೂಡ್‌ಸೆಟ್, ಎನ್.ಎಸ್.ಡಿ.ಸಿ., ಡಾನ್‌ಬಾಸ್ಕೊ ನಂತಹ ಸಂಸ್ಥೆಗಳ ಜೊತೆಗೆ ಸ್ತ್ರೀಶಕ್ತಿ ಯೋಜನೆಯ ಪ್ರಯೋಜನಗಳನ್ನು ಸಹ ಒದಗಿಸಲು ಕ್ರಮ ವಹಿಸಲಾಗಿದೆ. |

| | | |
|---|---|---|
| | ➢ Appoint a legal advisor for effective legal counseling in line with social workers and family counselor.<br><br>➢ There is no system for following no cases settled by Santwana Centres. It is particularly important that counseled cases be followed up in a subtle way, lest things return to the old state or get aggravated. | ➢ ಈಗಾಗಲೇ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಗೆ ಕಾನೂನು ಸೇವಾ ಪ್ರಾಧಿಕಾರದಿಂದ ನೇಮಿಸಲ್ಪಟ್ಟ ವಕೀಲರ ಸಹಕಾರವನ್ನು ಪಡೆಯಲು ತಿಳಿಸಲಾಗಿದೆ. ಅಲ್ಲದೇ ಪ್ರತಿ ಪ್ರಕರಣವು ನ್ಯಾಯಾಲಯದಲ್ಲಿ ದಾಖಲಾದಲ್ಲಿ ರೂ.2000/– ಗಳನ್ನು ಹಾಗೂ ಪ್ರಕರಣ ಇತ್ಯರ್ಥಗೊಂಡಲ್ಲಿ ರೂ.2000/–ಗಳನ್ನು ಇಲಾಖಾವತಿಯಿಂದ ನೀಡಲಾಗುತ್ತಿತ್ತು. ಕಾನೂನು ಸೇವಾ ಪ್ರಾಧಿಕಾರದಿಂದ ನೇಮಿಸಲ್ಪಟ್ಟ ವಕೀಲರ ಸೇವೆಯನ್ನು ಉಚಿತವಾಗಿ ಒದಗಿಸಲಾಗುತ್ತಿರುವ ಕುರಿತು ಸೂಕ್ತ ತಿದ್ದುಪಡಿಗಾಗಿ ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ.<br><br>➢ ಸಾಂತ್ವನ ಕೇಂದ್ರಗಳಲ್ಲಿ ದಾಖಲಾಗುವ ಪ್ರಕರಣಗಳ ಅನುಸರಣೆಗಾಗಿ ಇಲಾಖೆಯಿಂದ ನಿರ್ದಿಷ್ಟ ಕಾರ್ಯವಿಧಾನವನ್ನು (Standard of Procedure)ರಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |
| 8 | **<u>Honorarium to Staff :</u>** The honoraria provided to counselor and staff of the centers needs to be enhanced as the activities require qualified personnel and also needs more travel and co-ordination with the different departments and community. | ➢ ವರದಿಯಲ್ಲಿನ ಶಿಫಾರಸ್ಸಿನಂತೆ ಸಾಂತ್ವನ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಗೌರವಧನ ಹೆಚ್ಚಿಸಲು ಮುಂದಿನ ಆರ್ಥಿಕ ವರ್ಷಧಲ್ಲಿ ಪರಿಶೀಲಿಸಲು ಕ್ರಮವಹಿಸುವಂತೆ ಆರ್ಥಿಕ ಇಲಾಖೆಯು ಅಭಿಪ್ರಾಯಿಸಿರುತ್ತದೆ. |
| 9 | **<u>Involvements of corporate Organization :</u>** Corporate Organization could be involved under Corporate Social Responsibility (CSR) activities. This will help in providing skill development training and further economic rehabilitation. | ➢ ಮಹಿಳೆಯರ ಅಗತ್ಯತೆಗೆ ಅನುಗುಣವಾಗಿ ಕೌಶಲ್ಯಾಭಿವೃದ್ಧಿ ಮತ್ತು ಆರ್ಥಿಕ ಪುನರ್ವಸತಿ ಕಲ್ಪಿಸಲು ಸಾಂಸ್ಥಿಕ ಸಂಸ್ಥೆಗಳ (Corporate Organisation) ನೆರವನ್ನು ಪಡೆಯಲು ಕ್ರಮ ವಹಿಸಲಾಗುವುದು. |

(ಸಂಧ್ಯಾ ಎಲ್ ನಾಯಕ್)
ಸರ್ಕಾರದ ಅಧೀನ ಕಾರ್ಯದರ್ಶಿ-1
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು
ಹಿರಿಯ ನಾಗರೀಕರ ಸಬಲೀಕರಣ ಇಲಾಖೆ.
ದೂರವಾಣಿ ಸಂಖ್ಯೆ : 080 – 2203 2931